ಸಾಗುವ ತನಕವೂ ಬಿದ್ದ ಮಂಜಿನಿಂದ ಬೆಳಕು ಪ್ರತಿಫಲಿಸುತ್ತಿತ್ತು.

ಇನ್ನೂ ಹಸಿ ಮಣ್ಣಿನ ಕಣಗಳನ್ನು ಅಂಟಿಸಿಕೊಂಡೇ ನಭಕ್ಕೆ ಮುಖಮಾಡಿ ನಿಂತ ಬೇರಿನ ಹಿನ್ನೆಲೆಯಲ್ಲಿ ಬ್ರಿಯಾನಾಳ ಮನೆ ಕಂಡು ಆಶ್ಚರ್ಯವಾಯಿತು. ಬ್ರಿಯಾನಾ ನನ್ನ 'ಮಾಮ್ ಫ್ರೆಂಡ್.' ಅವಳ ಮಗಳು ಟೇಮಿ ಮತ್ತು ನನ್ನ ಮಗು ವಿಸ್ಮಯ ಇಬ್ಬರೂ ಹುಟ್ಟುವ ಮೊದಲು ಎರಡು ವರ್ಷಗಳ ಹಿಂದೆ ಟೌನ್‌ಶಿಪ್ಪಿನ ಗ್ರಂಥಾಲಯ ತಾಯ್ತನದ ಹೊಸ್ತಿಲಲ್ಲಿರುವವರಿಗೆ ನಡೆಸುವ ನ್ಯೂಟ್ರಿಷನ್ ಶಿಬಿರದಲ್ಲಿ ನಮ್ಮಿಬ್ಬರ ಭೇಟಿಯಾಗಿತ್ತು. ಅಂದು ನಮ್ಮ ಮನೆಗಳಿರುವುದೂ ಒಂದೇ ಕ್ರಾಸಿನ ಅಂತರದಲ್ಲಿ ಅಂತ ತಿಳಿದು ಹರ್ಷಗೊಂಡಿದ್ದೆವು.

"ಹಿತ್ತಿಲಿನ ಪೈನ್ ಮರ ಬಿದ್ದು ನಮ್ಮಿಬ್ಬರ ಮನೆಗಳನ್ನೂ ಎಷ್ಟು ಹತ್ತಿರವಾಗಿಸಿದೆ ನೋಡು" ಅಂತ ಫೋಟೊ ಹೊಡೆದು ಮೆಸೇಜು ಕಳಿಸಿದೆ. "ನಿನ್ನ ಬಳಿ ಮಾತನಾಡಬೇಕು. ಫೋನಿನಲ್ಲಿ ಹೇಳುವ ಮನಸ್ಸಿಲ್ಲ. ಮನೆಗೆ ಬರಬಹುದೇ?" ಅಂತ ಗುಟ್ಟು ಮಾಡಿದಳು. "ನೀನು ಹೊರಗೆ ಬಂದಾದರೂ ನೋಡು. ಮನೆಗೆ ಬರುವುದೇ ಬೇಕಿಲ್ಲ. ನೀನು ಈಗಲೇ ನಿಮ್ಮ ಬಾಲ್ಕನಿಯಲ್ಲಿ ಬಂದು ನಿಂತರೆ ನಾವು ಸಂಜ್ಞೆಗಳಲ್ಲೇ ಮಾತನಾಡಬಹುದು" ಅಂತ ಸಂದೇಶ ಬರೆದೆ. ಅದೇಕೋ ಅವಳು ನನ್ನ ಉಮೇದನ್ನು ಹಂಚಿಕೊಳ್ಳಲಿಲ್ಲ. "ಸಂಜೆ ನಾಲ್ಕಕ್ಕೆ ಬರುತ್ತೇನೆ" ಎಂದಷ್ಟೇ ಬರೆದು ಸುಮ್ಮನಾದಳು.

ಬ್ರಿಯಾನಾ ನೈಜೀರಿಯಾ ದೇಶದ ಮಧ್ಯಮವರ್ಗದ ಕುಟುಂಬವೊಂದರಲ್ಲಿ ಬೆಳೆದವಳು. ಅವಳ ಇಂಗ್ಲಿಷಿಗೆ ಆಫ್ರಿಕಾ ಖಂಡದ ವಿಶಿಷ್ಟ ಪಲುಕಿತ್ತು. ನ್ಯೂಯಾರ್ಕಿನ ಫೈನಾನ್ಸ್ ಕಂಪನಿಯೊಂದರಲ್ಲಿ ಅವಳ ಗಂಡ ಟೆಡಿ ಕೆಲಸ ಮಾಡುತ್ತಾನೆ. ಮದುವೆಯ ನಂತರ ಅಮೆರಿಕಕ್ಕೆ ಬಂದ ಇವಳೂ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದು ಇಲ್ಲಿನ ವಾರಪತ್ರಿಕೆಯೊಂದರಲ್ಲಿ ಉಪಸಂಪಾದಕಿಯಾಗಿದ್ದಳು.

ಕೋವಿಡ್ ಕಾರಣದಿಂದ ಕಳೆದ ವರ್ಷ ಮಾರ್ಚ್ ತಿಂಗಳಿನಿಂದಲೇ ನಮ್ಮಲ್ಲಿ ಬಹುತೇಕರು ಸ್ವಯಂಪ್ರೇರಿತ ಕ್ವಾರಂಟೀನನ್ನು ಆಚರಿಸುತ್ತಿರುವುದರಿಂದ ಎರಡು ಅಥವಾ ಮೂರು ಕುಟುಂಬಗಳಷ್ಟು ಸಣ್ಣ ಗುಂಪುಗಳು 'ಬಬಲ್' ರೀತಿ ಮಾಡಿಕೊಂಡು ವ್ಯವಹರಿಸುತ್ತಿದ್ದೆವು. ಚಿಕ್ಕ ಮಕ್ಕಳು ತಂದೆ ತಾಯಿ ಬಿಟ್ಟು ಇನ್ನ್ಯಾರನ್ನೂ ವರ್ಷಗಟ್ಟಲೇ ನೋಡದಿರುವುದು ಅವರ ಬೆಳವಣಿಗೆಯ ದೃಷ್ಟಿಯಿಂದ ಆರೋಗ್ಯಕರವಲ್ಲವೇನೋ ಎಂಬ ಕಾಳಜಿಯಿಂದ ಬಹಳಷ್ಟು ಜನ ಹೀಗೆ ಸಣ್ಣ ಗುಂಪುಗಳನ್ನು ಮಾಡಿಕೊಂಡಿರುವುದನ್ನು ಬ್ರಿಯಾನಾಳೇ ಮೊದಲು ತಿಳಿಸಿದ್ದು. ಆದರೆ, ಈ ಗುಂಪಿನಲ್ಲಿ ಒಬ್ಬರು ಹೊರ ಜಗತ್ತಿನ ಸಂಪರ್ಕಕ್ಕೆ ಬಂದರೂ ಎಲ್ಲರೂ ಎರಡುವಾರ ನಮ್ಮ ನಮ್ಮ ಮನೆಯಲ್ಲಿ ಕ್ವಾರಂಟೀನ್ ಮಾಡಬೇಕಿತ್ತು.

ಈ 'ಪ್ಲೇ ಡೇಟು'ಗಳ ದೆಸೆಯಿಂದಲೇ ನನ್ನ ಮತ್ತು ಬ್ರಿಯಾನಾಳ ಕುಟುಂಬಗಳು ಇನ್ನಷ್ಟು ಹತ್ತಿರವಾಗಿದ್ದು. ವಾರಕ್ಕೆರಡು ಬಾರಿ ನಮ್ಮಿಬ್ಬರ ಮಕ್ಕಳು ಲೆಗೋ ಸೆಟ್ಟಿನಲ್ಲಿ ಮನೆ ಕಟ್ಟುವಾಗ ಅವರ ಮೇಲೆ ಕಣ್ಣಿಟ್ಟೇ ಟೀ ಕುಡಿಯುತ್ತ ನಮಗೆ ಮನಸ್ಸು ಬಿಚ್ಚಿ ಮಾತನಾಡಲು ಸಾಧ್ಯವಾಗುತ್ತಿತ್ತು. ನನ್ನ ಮತ್ತು ಅವಳ ಸಂಗಾತಿಗಳೂ ಸಂಜೆ ಬಂದು ಸೇರಿಕೊಳ್ಳುತ್ತಿದ್ದರು. ಬ್ರಿಯಾನಾ ತಯಾರಿಸುತ್ತಿದ್ದ ಎಗೂಸಿ ಸೂಪ್ ಮತ್ತು ಜೊಲಾಫ್ ರೈಸ್ ನನಗೆ ಬಹಳ ಸೇರುತ್ತಿತ್ತು. "ನಮ್ಮಮ್ಮನ ರೆಸಿಪಿ ಅದು, ತಲೆಮಾರುಗಳಿಂದ ಮಗಳಿಂದ ಮಗಳಿಗೆ ದಾಟಿಸಲಾಗಿದೆ" ಅಂತ ಅವಳು ಹೆಮ್ಮೆಯಿಂದ ನುಡಿದಿದ್ದಳು. ವಾರಕ್ಕೊಮ್ಮೆ ಇಬ್ಬರಲ್ಲೊಬ್ಬರ ಮನೆಯಲ್ಲಿ ರಾತ್ರಿಯ ಊಟವನ್ನು ಮುಗಿಸಿ ಸೋಫಾದಲ್ಲಿ ಮೈಚೆಲ್ಲುತ್ತ 'ಬ್ರಿಡ್ಜ್' ಆಟವನ್ನು ಆಡತೊಡಗಿದೆವೆಂದರೆ ವಾರಾಂತ್ಯಕ್ಕೊಂದು ಕಳೆ ಬಂತೆಂದು ಅರ್ಥ.

ಬ್ರಿಯಾನಾ ನೈಜೀರಿಯಾದಲ್ಲಿ ಬೆಳೆದ ಬಗ್ಗೆ ತನ್ನ ಅನುಭವದಾಳದ ತೀವ್ರತೆಯಲ್ಲಿ